# ಪ್ಯಾನ್ ಇಂಡಿಯಾ ಪರಿಭಾಷೆಯ ಸುತ್ತ...

**ಪ್ಯಾನ್ ಇಂಡಿಯಾ ಸಿನಿಮಾ ಎಂಬುದು ಕೇವಲ ಈಗ ತೇಲಿಬಿಟ್ಟಿರುವ ಪರಿಭಾಷೆ ಅಷ್ಟೆ ಎಂದು ನಟಿ ಖುಷ್ಬೂ ಚರ್ಚೆ ತೇಲಿಬಿಟ್ಟರು. ಅನುಮಪ್ ಖೇರ್ ಅಂತೂ ಹಿಂದಿ ಚಿತ್ರರಂಗದವರ ತಾವೇ ಶ್ರೇಷ್ಠ ಎಂಬ ಭಾವನೆಗೆ ಸೂಜಿ ಚುಚ್ಚಲಾಗಿದೆ ಎಂದು ಒಪ್ಪಿಕೊಂಡರು. ಇಂತಹ ಅರ್ಥಪೂರ್ಣ ಮಾತುಕತೆ ನಡೆದದ್ದು ಇತ್ತೀಚೆಗೆ ಮುಂಬೈನಲ್ಲಿ ನಡೆದ ಜಾಗತಿಕ ಶ್ರವಣದೃಶ್ಯ ಶೃಂಗದಲ್ಲಿ...**



■ **ಎನ್ವಿ**

ಮುಂಬೈನಲ್ಲಿ ಇತ್ತೀಚೆಗೆ ನಡೆದ 'ಜಾಗತಿಕ ಶ್ರವಣ–ದೃಶ್ಯ ಮನರಂಜನೆ ಶೃಂಗ' (**World Audio Visual Entertainment Summit – WAVES**)ನಲ್ಲಿ ದಕ್ಷಿಣ ಭಾರತದ ಚಿತ್ರರಂಗದ ಜನಪ್ರಿಯರ ದಂಡೇ ನೆರೆದಿತ್ತು. ಅದರಲ್ಲೂ ತೆಲುಗು ಚಿತ್ರೋದ್ಯಮದ ಪ್ರಾತಿನಿಧ್ಯಕ್ಕೆ ದೊಡ್ಡ ಪಾಲು. ಎಸ್.ಎಸ್. ರಾಜಮೌಳಿ, ಎಂ.ಎಂ. ಕೀರವಾಣಿ, ನಾಗಾರ್ಜುನ, ಅವರ ಪುತ್ರ ನಾಗ ಚೈತನ್ಯ, ವಿಜಯ್ ದೇವರಕೊಂಡ, ಅಲ್ಲು ಅರ್ಜುನ್ ಅಲ್ಲಿದ್ದವರಲ್ಲಿ ಮುಖ್ಯರಾದವರು. ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ರಜನೀಕಾಂತ್ ಉಪಸ್ಥಿತಿಯು ಉದ್ಘಾಟನಾ ಸಮಾರಂಭದ ದಿನದ ಬೋನಸ್ಸು. ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್, ನಟ ಕಾರ್ತಿ ಹಾಜರಿಯೂ ಇತ್ತು. ಕನ್ನಡ ಚಿತ್ರರಂಗದ ತಾರಾಬಳಗದ ಇಂತಹ ಯಾವ ಪ್ರಾತಿನಿಧ್ಯವೂ ಅಲ್ಲಿ ಇರಲಿಲ್ಲ.

ತೆಲುಗು ಚಿತ್ರೋದ್ಯಮದೊಂದಿಗೆ ಹಿಂದಿ ಚಿತ್ರರಂಗ ದೊಡ್ಡ ಮಟ್ಟದಲ್ಲಿ ಕೈಕುಲುಕುತ್ತಿರುವುದರ ಸೂಚನೆ ಇದು. ಅಲ್ಲಿ ಸ್ಟುಡಿಯೊ ಚಟುವಟಿಕೆಯು ದಕ್ಷಿಣ ಭಾರತದ ಉಳಿದೆಲ್ಲ ಚಿತ್ರರಂಗಗಳಿಗಿಂತ ಹೆಚ್ಚು ವಿಸ್ತಾರಗೊಂಡಿದೆ. ಬಜೆಟ್ ವಿಷಯದಲ್ಲಿಯೂ ಅದು ಬೆಳೆದು ನಿಂತಿರುವ ಬಗೆಯು ಹಿಂದಿ ಚಿತ್ರರಂಗಕ್ಕೆ ಸರಿಗಟ್ಟುವಂತಿದೆ. 'ಆರ್‌ಆರ್‌ಆರ್' ತೆಲುಗು ಸಿನಿಮಾದ 'ನಾಟು ನಾಟು' ಹಾಡಿಗೆ ಆಸ್ಕರ್ ದಕ್ಕಿದ ಸಂಕಥವನ್ನು ಹಿಂದಿ ಚಿತ್ರರಂಗವೂ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದೆ. ₹87 ಕೋಟಿ ವ್ಯಯಿಸಿದ ನಂತರ ದೊರಕಿದ ಪ್ರಶಸ್ತಿ ಅದೆನ್ನುವುದು ಮುಖ್ಯ.

'ವೇವ್ಸ್'ನಲ್ಲಿ 'ಪ್ಯಾನ್ ಇಂಡಿಯಾ ಸಿನಿಮಾ ಎನ್ನುವುದು ಭ್ರಮೆಯೋ, ಕ್ಷಣಭಂಗುರದ ಸಂಗತಿಯೋ' ಎಂಬ ವಿಷಯದ ಗೋಷ್ಠಿ ಇತ್ತು. ಅದರಲ್ಲಿ ಮಾತನಾಡುತ್ತಾ ನಟ ನಾಗಾರ್ಜುನ ಹೇಳಿದ ಮಾತು ಗಮನಸೆಳೆಯುವಂತಿತ್ತು. 'ಪುಷ್ಪ ಚಿತ್ರದ ಕಥೆ ತೆಲುಗಿನ ಜನರಿಗೆ ಹೊಸತೇನೂ ಅಲ್ಲ. ಆದರೆ, ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ, ಪಂಜಾಬ್ ಜನರಿಗೆ ಪುಷ್ಪರಾಜ್ ರೀತಿಯ ಹೀರೊ ಅಗತ್ಯವಿತ್ತೆನ್ನಿಸುತ್ತದೆ. ಅದನ್ನು ಅವರು ದೊಡ್ಡ ಮಟ್ಟದಲ್ಲಿ ಸ್ವೀಕರಿಸಿದರು. ಹಾಲಿವುಡ್ ಅಥವಾ ಬೇರೆ ದೇಶಗಳ ಸಿನಿಮಾಗಳಲ್ಲಿ ಸೂಪರ್ ಹೀರೊ ಅಥವಾ ನಿಜ ಬದುಕಿನದಕ್ಕಿಂತ ದೊಡ್ಡದಾದ ಪಾತ್ರವನ್ನು ಜನರಿಗೆ ತೋರಿಸಲು ಒಂದು ಸಿನಿಮೀಯ ತರ್ಕದ ಅಗತ್ಯವಿದೆ. ನಮಗೆ ಅದು ಬೇಕಿಲ್ಲ. ಅದು ದೇಶದ ಉದ್ದಗಲಕ್ಕೂ ಪುಷ್ಪರಾಜ್ ಪಾತ್ರ ಸ್ವೀಕೃತಿಯ ಮೂಲಕ ಮತ್ತೆ ರುಜುವಾತಾಗಿದೆ. ನಾವು ಯಾವುದೇ ತರ್ಕ ಬಯಸದೆ ಎದ್ದು ನಿಂತು ಚಪ್ಪಾಳೆ ಹೊಡೆಯುತ್ತೇವೆ. ಜನರಿಗೆ ತಮ್ಮ ಜಂಜಡ ಮರೆತು, ಮೈಮರೆವಿನಿಂದ ನೋಡುವಂತಹ ಚಿತ್ರಗಳು ಬೇಕಾಗಿವೆ.'

ಹತ್ತಾರು ಜನರನ್ನು ಹೊಡೆಯುವ ನಾಯಕನೇ ಈಗಲೂ ನಮ್ಮ ಜನರಿಗೆ ಬೇಕಾಗಿದೆ ಎಂದು ನಟಿ ಖುಷ್ಬೂ ಮಾತು ಸೇರಿಸಿದರು. 'ಇಲ್ಲಿ ನೈತಿಕ ಪ್ರಜ್ಞೆಯೊಂದು ಇದೆ. ತನ್ನ ಕುಟುಂಬದವರನ್ನು ನಾಯಕ ರಕ್ಷಿಸಿದರೆ ಸಾಕು' ಎಂದು ನಾಗಾರ್ಜುನ ಸ್ಪಷ್ಟನೆ ಕೊಟ್ಟರು.

'ಅಲ್ಲು ಅರ್ಜುನ್ ದಶಕಗಳಿಂದ ತೆಲುಗು ಚಿತ್ರಗಳಲ್ಲಿ ನಟಿಸುತ್ತಾ ಬಂದಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಅವರ ನೃತ್ಯವನ್ನು ದೇಶದ ಉದ್ದಗಲಕ್ಕೂ ಜನರು ಇಷ್ಟಪಡಲಾರಂಭಿಸಿದರು. ಅದರಿಂದ ಬೆಳೆಯುತ್ತಾ ಬಂದ ಜನಾನುರಾಗ ಇವತ್ತು ಅವರನ್ನು ಪ್ಯಾನ್‌ಇಂಡಿಯಾ ಸ್ಟಾರ್ ಆಗಿ ಮಾಡಿದೆ' ಎಂದು ತಮಿಳು ನಟ ಕಾರ್ತಿ ವಿಶ್ಲೇಷಿಸಿದರು. ತಾವು ಮಾಡುವ ಎಲ್ಲ ಸಿನಿಮಾಗಳೂ ಪ್ಯಾನ್ ಇಂಡಿಯಾ ಆಗಬೇಕು ಎಂದು ಬಯಸುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಖುಷ್ಬೂ ಈ ವಿಷಯಕ್ಕೆ ಇನ್ನೊಂದು ತಾತ್ವಿಕ ಚೌಕಟ್ಟು ನೀಡಲು ಯತ್ನಿಸಿದರು. ಸಿನಿಮಾ ಎನ್ನುವುದು ಭಾವುಕತೆಯ ಮೆರವಣಿಗೆ. ಯಾವ ಚಿತ್ರದ ಭಾವನೆಗಳು ಇಡೀ ದೇಶದ ಜನರಿಗೆ ಹತ್ತಿರವಾಗಬಲ್ಲವೋ ಅಂತಹ ಚಿತ್ರ ಸಹಜವಾಗಿಯೇ ಪ್ಯಾನ್–ಇಂಡಿಯಾ ಆಗಿಬಿಡುತ್ತದೆ ಎಂದರು. ಹಿಂದೆ ನಟಿಯರಾದ ವೈಜಯಂತಿಮಾಲಾ, ಹೇಮಾಮಾಲಿನಿ, ರೇಖಾ, ಜಯಪ್ರದಾ, ಶ್ರೀದೇವಿ ಮೊದಲಾದ ನಟಿಯರು ದಕ್ಷಿಣ ಭಾರತದಿಂದ ಹಿಂದಿ ಚಿತ್ರರಂಗದಲ್ಲಿ ಹಲವಾರು ಸಿನಿಮಾಗಳಲ್ಲಿ ನಟಿಸಿ ಸೈ ಎನ್ನಿಸಿಕೊಂಡರು. ಅದೂ ಒಂದು ಬಗೆಯಲ್ಲಿ ಪ್ಯಾನ್–ಇಂಡಿಯಾ ಪ್ರಯತ್ನವೇ ಆಗಿತ್ತಲ್ಲವೆ ಎನ್ನುವುದು ಅವರ ಪ್ರಶ್ನೆ.

ಹಿಂದಿ ನಟ ಅನುಪಮ್ ಖೇರ್ ಒಂದು ತಪ್ಪೊಪ್ಪಿಗೆಯನ್ನು ಮಂಡಿಸಿದರು: 'ಕೋವಿಡ್‌ವರೆಗೆ ಹಿಂದಿ ಚಿತ್ರರಂಗದವರಿಗೆ ತಾವೇ ಶ್ರೇಷ್ಠ ಎಂಬ ಅಹಮಿಕೆಯಿತ್ತು. ಚಿತ್ರಮಂದಿರಗಳು ಬಂದ್ ಆದ ನಂತರ ಒಟಿಟಿ ಮತ್ತಿತರ ಆನ್‌ಲೈನ್‌ವೇದಿಕೆಯಲ್ಲಿ ಜನರು ಎಲ್ಲ ಭಾಷೆಗಳ ಚಿತ್ರ ನೋಡಿದ್ದೇ, ಅರಿವು ವಿಸ್ತಾರವಾಯಿತು. ಅದರ ಪರಿಣಾಮವನ್ನು ಈಗ ನಾವು 'ಪ್ಯಾನ್ ಇಂಡಿಯಾ' ಎಂಬ ಪರಿಭಾಷೆಯಲ್ಲಿ ಬಣ್ಣಿಸುತ್ತಿದ್ದೇವೆ.'

'ಪ್ಯಾನ್ ಇಂಡಿಯಾ' ಪ್ರಜ್ಞೆಯಿಂದಲೇ 'ವೇವ್ಸ್' ಆಯೋಜಿತವಾಗಿತ್ತೆನ್ನುವುದನ್ನು ವಿಶೇಷವಾಗಿ ಹೇಳಬೇಕಿಲ್ಲ. ■